ಸಾಕ್ಷಿದಾರರಿಗೆ ದಿನಾಂಕಃ 24.01.2017 ರಂದು ಕರೆಯಿಸಿ ಪ್ರಮಾಣ ವಚನ ಕೊಡಿಸಲಾಯಿತು.

**<u>ಪಾಟೀಸವಾಲು 7ನೇ ಪ್ರತಿವಾದಿಯಪರ ವಕೀಲರಿಂದಃ-</u>**

ದಾವಾ ಆಸ್ತಿಯ ಪಹಣಿ ಪತ್ರಿಕೆಯನ್ನು ನೋಡಿದ್ದೇನೆ. ನಿಪಿ-2ರಲ್ಲಿ ಜಮೀನಿನ ಕ್ಷೇತ್ರವನ್ನು 2.08 ಎಕರೆ ಎಂದು ನಮೂದಿಸಿದೆ ಎನ್ನುವುದು ನಿಜ. ನಿಪಿ-7ರಲ್ಲಿ ಜಮೀನಿನ ಕ್ಷೇತ್ರವನ್ನು 2.16 ಎಕರೆ ಎಂದು ನಮೂದಿಸಿದೆ. ನಿಪಿ-7ರಲ್ಲಿ ನಮೂದಿಸಿರುವಂತಹ ಜಮೀನು ಅಸ್ತಿತ್ವದಲ್ಲಿ ಇಲ್ಲ ಎನ್ನುವುದು ಸುಳ್ಳು.

ಕ್ರಯ ಕರಾರು ಪತ್ರವನ್ನು ಬರೆಯಿಸಿಕೊಳ್ಳುದಕ್ಕಿಂತ ಪೂರ್ವದಲ್ಲಿ ನಾನು ಆ ಜಮೀನ್ನು ನೋಡಿದ್ದೇನೆ. ಆದರೆ ಆ ಜಮೀನು ಯಾರ ಸ್ವಾದೀನದಲ್ಲಿ ಇತ್ತು ಎನ್ನುವುದು ಗೊತ್ತಿಲ್ಲ. ಕ್ರಯ ಕರಾರು ಪತ್ರವಾಗುವುದಕ್ಕಿಂತ ಪೂರ್ವದಲ್ಲಿ ನಾನು ಆ ಜಮೀನನ್ನು ನೋಡಿಲ್ಲ ಎನ್ನುವುದು ಸುಳ್ಳು. ಪ್ರಾರಂಭದಲ್ಲಿ ನಾನು 25 ಸಾವಿರ ರೂಪಾಯಿ ನಗದು ಹಣವನ್ನು, ಕ್ರಯ ಕರಾರು ಪತ್ರವಾಗುವ ದಿವಸ 4,75,000-00 ಹಣವನ್ನು ಚೆಕ್ಕ ಮೂಲಕ, ತದ ನಂತರ 5,00,000-00 ರೂಪಾಯಿ ನಗದು ಹಣವನ್ನು 1ನೇ ಪ್ರತಿವಾದಿಗೆ ಕೊಟ್ಟಿದ್ದೇವೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎನ್ನುವುದು ಸುಳ್ಳು.

ನಿಪಿ-7ನ್ನು ನಾನು ನೋಡಿದ್ದೇನೆ ಅದರಲ್ಲಿ ಏನು ಬರೆದಿದೆ ಎನ್ನುವುದು ಗೊತ್ತು. ನಾನು ದಾವಾ ಆಸ್ತಿಯನ್ನು ಖರೀದಿಸಬೇಕೆಂಬ ಉದ್ದೇಶದಿಂದ ಕ್ರಯ ಕರಾರು ಪತ್ರವನ್ನು ಬರೆಯಿಸಿಕೊಂಡಿದ್ದೇವೆ. ನಮ್ಮ ಹೆಸರಿಗೆ ಅಥವಾ ನಾವು ಸೂಚಿಸಿದವರ ಹೆಸರಿಗೆ ಕ್ರಯ ಪತ್ರವನ್ನು ಬರೆದುಕೊಡುತ್ತೇವೆ ಎಂದು ನಿಪಿ-7ರಲ್ಲಿ ನಮೂದಿಸಿದೆ. ಈ ಜಮೀನನ್ನು ಖರೀದಿಸಬೇಕೆಂಬ ಉದ್ದೇಶ ನಿಮಗೆ ಇಲ್ಲದೆ ಇದ್ದುದ್ದರಿಂದ ಆ ರೀತಿ ಬರೆಯಿಸಿದ್ದೀರಿ ಎನ್ನಲಾಗಿ ಅದು ಸುಳ್ಳು ಎನ್ನುವರು. ನಾವು 1 ರಿಂ ದ5ನೇ ಪ್ರತಿವಾದಿಯರಿಗೆ 4,75,000-00 ರೂಪಾಯಿ ಹಣವನ್ನು ಸಾಲವನ್ನಾಗಿ ಕೊಟ್ಟಿದ್ದೆವು ಎನ್ನುವುದು ಆ ಸಾಲದ ಭದ್ರತೆಗಾಗಿ ನಿಪಿ-7ರ ಪ್ರಕಾರದ ದಾಖಲೆಯನ್ನು ಬರೆಯಿಸಿಕೊಂಡಿದ್ದೇವೆ ಎನ್ನುವುದು

ಸುಳ್ಳು. 4,75,000-00 ರೂಪಾಯಿ ಹಣವನ್ನು ಮರುಪಾವತಿ ಮಾಡಲು 1 ರಿಂದ 5ನೇ ಪ್ರತಿವಾದಿಯರು ನಮ್ಮ ಬಳಿ ಬಂದಿದ್ದರು ಎನ್ನುವುದು ನಾವು ಆ ಹಣವನ್ನು ಪಡೆಯಲು ನಿರಾಕರಿಸಿದೆವು ಎನ್ನುವುದು ಸುಳ್ಳು. ಸಾಲದ ಭದ್ರತೆಗಾಗಿ ಬರೆಯಿಸಿಕೊಂಡ ಪತ್ರವನ್ನು ನಾವು ದುರುಪಯೋಗಪಡಿಸಿಕೊಂಡು ಈ ದಾವೆಯನ್ನು ಹೂಡಿದ್ದೇವೆ ಎನ್ನುವುದು ಸುಳ್ಳು.

**ಮಿಕ್ಕುಳಿದ ವಿಷಯಕ್ಕೆ ಸಂಬಂಧಿಸಿದ 1 ರಿಂದ 5ನೇ ಪ್ರತಿವಾದಿಯರ ಪರವಾಗಿ ಮಾಡಿದ ಪಾಟೀಸವಾಲನ್ನು ಅನುಕರಣೆ ಮಾಡುವುದಾಗಿ 7ನೇ ಪ್ರತಿವಾದಿಯ ಪರ ವಕೀಲರು ಸಬ್‌ಮಿಟ್ ಮಾಡುತ್ತಿದ್ದಾರೆ**

**6ನೇ ಪ್ರತಿವಾದಿ ಗೈರು ಹಾಜರಿ ಅವರಪರ ವಕೀಲರು ಗೈರು ಹಾಜರಿ ಆದ್ದರಿಂದ ಅವರ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೆ ಕೆ ಸರಿ ಅದೆ, ನನ್ನ ಸಮಕ್ಷಮ,

2ನೇ ಹೆಚ್ಚುವರಿ ಹಿ. ದಿ. ನ್ಯಾಯಾಧೀಶರು, ಹುಬ್ಬಳ್ಳಿ.